# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1360 |
| ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 19.03.2025 |
| ಉತ್ತರಿಸುವ ಸಚಿವರು | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಲೋಕೋಪಯೋಗಿ ಇಲಾಖೆಯಿಂದ ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನ ಕೈಗೊಂಡಲ್ಲಿ ನೀಡುವ ಪರಿಹಾರದ ಮೊತ್ತವನ್ನು ಯಾವ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. | ಲೋಕೋಪಯೋಗಿ ಇಲಾಖಾವತಿಯಿಂದ ರಸ್ತೆ ನಿರ್ಮಾಣಕ್ಕಾಗಿ ಭೂಸ್ವಾಧೀನ ಕೈಗೊಳ್ಳಲು ಸಂಬಂಧಪಟ್ಟ ಭೂಮಾಲೀಕರ ಸ್ವಾಧೀನ ಪಡಿಸಿಕೊಳ್ಳಲಾಗುವ ಭೂಮಿಯನ್ನು ಅಳತೆ ಮಾಡಿ ದಾಖಲೆಗಳೊಂದಿಗೆ ಸರ್ಕಾರದ ಆದೇಶ ಸಂಖ್ಯೆ.:ಕಇಂ/ಭೂಸ್ವಾಳ/2014 ದಿನಾಂಕ.31.05.2016ರ ಕಂಡಿಕೆ (2)ರಂತೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ.<br><br>ಸದರಿ ಪ್ರಸ್ತಾವನೆಯನ್ವಯ ಜಿಲ್ಲಾಧಿಕಾರಿಗಳು ಅಥವಾ ಉಪವಿಭಾಗಾಧಿಕಾರಿಗಳು (ವಿಶೇಷ ಭೂಸ್ವಾಧೀನ ಅಧಿಕಾರಿಗಳು) ಒಳಗೊಂಡ ದರ ನಿರ್ಧರಣಾ ಸಮಿತಿಯವರು ಹಿಂದಿನ ಮೂರು ವರ್ಷಗಳಲ್ಲಿ ಆ ಭಾಗದಲ್ಲಿ ಮಾರಾಟವಾದ ಭೂಮಿಯ ಬಗ್ಗೆ ಉಪ ನೊಂದಣಾಧಿಕಾರಿಗಳಿಂದ ಮಾರಾಟ ಅಂಕಿ ಅಂಶ ವರದಿ ಪಡೆದು ದರ ನಿಗಧಿಪಡಿಸಿ ನೀಡುವ ಲೆಕ್ಕ ಪತ್ರ ತಃಖ್ತೆಯಂತೆ ಭೂಪರಿಹಾರ ಮೊತ್ತವನ್ನು ನಿರ್ಧರಿಸಲಾಗುತ್ತದೆ. |
| ಆ) | ಹಲವು ಗ್ರಾಮಗಳ ಖಾಸಗಿ ಜಮೀನಿನಲ್ಲಿ ಈ ಹಿಂದೆ ರಸ್ತೆ ನಿರ್ಮಾಣವಾಗಿದ್ದರೂ ಸಂಬಂಧಿಸಿದ ಭೂಮಾಲೀಕರಿಗೆ ಪರಿಹಾರ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸಂಬಂಧಿಸಿದ ರೈತರಿಗೆ ಯಾವಾಗ ಪರಿಹಾರ ನೀಡಲಾಗುವುದು. | ಲೋಕೋಪಯೋಗಿ ಇಲಾಖೆಗೆ ಒಳಪಟ್ಟ ಬಹುತೇಕ ರಸ್ತೆಗಳು ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿರುವ ರಸ್ತೆಗಳಾಗಿದ್ದು, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಇಲಾಖಾವತಿಯಿಂದ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರ ಮಾಡಲಾಗಿರುತ್ತದೆ.<br><br>ಈ ರೀತಿ ಹಸ್ತಾಂತರಿಸಲ್ಪಟ್ಟ ಕೆಲವು ರಸ್ತೆಗಳಲ್ಲಿ, ತುಂಬಾ ಹಿಂದೆ ಖಾಸಗಿ ಜಮೀನುಗಳನ್ನು ರಸ್ತೆಗೆ ಸ್ವಇಚ್ಛೆಯಿಂದ ಬಿಟ್ಟುಕೊಟ್ಟಿದ್ದು, ಸದರಿ ರಸ್ತೆಗಳು ಬಹಳ ವರ್ಷಗಳಿಂದ ಸಾರ್ವಜನಿಕ ಉಪಯೋಗದಲ್ಲಿ ಇರುತ್ತವೆ. ಆದರೆ ಇದಕ್ಕೆ ಪೂರಕ ದಾಖಲೆಗಳು ಲಭ್ಯವಿರುವುದಿಲ್ಲ. ಲೋಕೋಪಯೋಗಿ ಇಲಾಖೆಗೆ ಹಸ್ತಾಂತರ ಪಡೆದ ರಸ್ತೆಗಳನ್ನು ಬಹುತೇಕ ಹಾಲಿ ಲಭ್ಯವಿರುವ ರಸ್ತೆ ಜಮೀನಿನ ಮಿತಿಯಲ್ಲಿಯೇ ಕ್ಯಾರೇಜ್‌ವೇ ಅಭಿವೃದ್ಧಿ ಪಡಿಸಲಾಗುತ್ತಿರುತ್ತದೆ.<br><br>ಕೆಲವು ವಲಯಗಳಲ್ಲಿ ಕಿರಿದಾದ ರಸ್ತೆಗಳನ್ನು |

| ಕ್ರ ಸಂ. | ಪ್ರಶ್ನೆ | ಉತ್ತರ |
| --- | --- | --- |
| | | ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸಲು ಬೇಕಾದ ಜಮೀನನ್ನು ಇಲಾಖೆಯ ಸುಪರ್ದಿಗೆ ಪಡೆದು ರಸ್ತೆ ಕಾಮಗಾರಿಯನ್ನು ನಿರ್ವಹಿಸಲಾಗುತ್ತದೆ. ತದನಂತರ ಸಂಬಂಧಿಸಿದ ಜಿಲ್ಲಾಧಿಕಾರಿ ಅಥವಾ ವಿಭಾಗ ಅಧಿಕಾರಿಗಳ ಮುಖಾಂತರ ನೇರ ಖರೀದಿ ಮೂಲಕ ಭೂಮಾಲೀಕರಿಂದ ಪಡೆದು ಭೂಪರಿಹಾರ ನೀಡುವುದು ಅಥವಾ ಆಯಾ ಪ್ರದೇಶದ 03 ವರ್ಷಗಳ ಅವಧಿಯಲ್ಲಿ ಮಾರಾಟವಾದ ಜಮೀನಿನ ಬೆಲೆಯನ್ನು ಆಧಾರವಾಗಿಟ್ಟುಕೊಂಡು ಬೆಲೆ ನಿರ್ಧರಿಸಿ ಪರಿಹಾರ ನೀಡಲು ಕ್ರಮವಹಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ಭೂಮಾಲೀಕರು ಇತ್ತೀಚಿನ ದಿನಗಳಲ್ಲಿ ಇಲಾಖೆಯು ನೀಡುವ ಭೂಪರಿಹಾರ ಮೊತ್ತವನ್ನು ಪ್ರಶ್ನಿಸಿ, ಸಂಬಂಧಿಸಿದ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸುತ್ತಿದ್ದು, ನ್ಯಾಯಾಲಯವು ನೀಡುವ ಆದೇಶವನ್ನು ಪರಿಶೀಲಿಸಿ, ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಅಥವಾ ಅದನ್ನು ನಿಗಧಿತ ಅವಧಿಯಲ್ಲಿ ಜಾರಿಗೊಳಿಸಿ, ಭೂಪರಿಹಾರ ಮೊತ್ತ ಪಾವತಿಸಲು ಕ್ರಮವಹಿಸಲಾಗುತ್ತದೆ. |
| ಇ) | ಈ ಹಿಂದೆ ಚಿಕ್ಕದಾದ ರಸ್ತೆ ಇದ್ದು ತದನಂತರ ರಸ್ತೆ ಅಗಲೀಕರಣ ಮಾಡಿದ ನಂತರ ರೈತರು ತಮ್ಮ ಆರ್.ಟಿ.ಸಿ. ಯಲ್ಲಿ ದಾಖಲಾಗಿರುವ ವಿಸ್ತೀರ್ಣಕ್ಕಿಂತ ಹೆಚ್ಚು ಭೂಮಿಯನ್ನು ಕಳೆದುಕೊಂಡಲ್ಲಿ ರೈತರಿಗೆ ಹೆಚ್ಚಿನ ಪರಿಹಾರ ನೀಡಲಾಗುವುದೇ | ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳಿಗೆ ಮತ್ತು ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿ ರಸ್ತೆಗಳಿಗೆ ಮೇಲ್ದರ್ಜೆಗೇರಿಸಿದ ರಸ್ತೆಗಳನ್ನು ಅಗಲೀಕರಣ ಮಾಡುವಾಗ ಖಾಸಗಿ ಜಮೀನುಗಳು ಸ್ವಾಧೀನಕ್ಕೆ ಒಳಪಟ್ಟಿದ್ದಲ್ಲಿ ಅಂತಹ ಜಮೀನುಗಳಿಗೆ ಸೂಕ್ತ ದಾಖಲೆಗಳೊಂದಿಗೆ ಜಿಲ್ಲಾಧಿಕಾರಿಗಳಿಗೆ ದರ ನಿರ್ಧರಣೆಗಾಗಿ ಪ್ರಸ್ತಾವನೆ ಸಲ್ಲಿಸಿ ಜಿಲ್ಲಾಧಿಕಾರಿಗಳ ದರ ನಿರ್ಧರಣಾ ಸಮಿತಿಯವರು ನಿಗದಿಪಡಿಸಿದ ದರದಂತೆ ಘನತೆವೆತ್ತ ರಾಜ್ಯಪಾಲರು ಕರ್ನಾಟಕ ಸರ್ಕಾರ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ರವರ ಹೆಸರಿಗೆ ನೊಂದಣಿ ಮಾಡಿದ ನಂತರದಲ್ಲಿ ಪರಿಹಾರದ ಹಣಪಾವತಿಗೆ ಕ್ರಮವಹಿಸಲಾಗುವುದು. |

ಲೋಇ 88 ಸಿಕ್ಯೂಎನ್ 2025(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು